ಬರೀ ಹೂವನ್ನು ಕೊಡುವುದರಿಂದ ಪ್ರಯೋಜನವಾಗುವುದಿಲ್ಲ. ತಮ್ಮ ಅಧಿಕಾರದ ಅವಧಿಯಲ್ಲಿ ಒಂದು ಲಕ್ಷ ರೂಪಾಯಿಯನ್ನು ಕೊಡುವ ವ್ಯವಸ್ಥೆ ಮಾಡಿ.

ಅಧ್ಯಕ್ಷರು : ನೀವು ವಿಧಾನ ಸಭೆಯ ಅಧ್ಯಕ್ಷರಾದಾಗ ಅದನ್ನು ಜಾರಿಗೆ ತನ್ನಿ.

ಚುಕ್ಕೆಗುರುತಿನ ಮತ್ತು ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಉತ್ತರ ಬರದಿರುವ ಬಗ್ಗೆ ಪ್ರಸ್ತಾಪ

ಶ್ರೀ ಎನ್.ಜಿ. ನಾಯಕ್ : ನಾನು ಲಿಖಿತ ಮೂಲಕ ಕೆಲವು ಪ್ರಶ್ನೆಗಳನ್ನು ಕೇಳಿದ್ದೇನೆ. ಅದಕ್ಕೆ ಉತ್ತರ ಬಂದಿಲ್ಲ. ಚುಕ್ಕೆ ಗುರುತಿನ 5 ಪ್ರಶ್ನೆಗಳಿಗೆ ಉತ್ತರ ಬಂದಿಲ್ಲ.

ಅಧ್ಯಕ್ಷರು : ಚುಕ್ಕೆ ಗುರುತಿನ ಪ್ರಶ್ನೆಗಳೇ?

ಶ್ರೀ ಎನ್.ಜಿ. ನಾಯಕ್ : ಅಲ್ಲಿ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆ.

ಅಧ್ಯಕ್ಷರು : ಅದನ್ನು ತರಿಸಿಕೊಡುವ ವಿಷ್ಣಾಡು ಮಾಡುತ್ತೇನೆ.

+ಶ್ರೀ ಎಸ್. ಯಡಿಯೂರಪ್ಪ : ಚುಕ್ಕೆ ಗುರುತಿನ ಪ್ರಶ್ನೆಗಳಲ್ಲಿ 5-6 ದಿನದಿಂದ ನೋಡುತ್ತಿದ್ದೇನೆ. ಯಾವುದಕ್ಕೂ ಉತ್ತರ ಬರುತ್ತಿಲ್ಲ. ಸದನದಲ್ಲಿ ಉತ್ತರವನ್ನು ಕೊಡತಕ್ಕ ಸಂದರ್ಭದಲ್ಲಿ ಅನೇಕ ಪ್ರಶ್ನೆಗಳು ಮುಂದೆಕ್ಕೆ ಹೋಗಿವೆ. ಲಿಖಿತ ಮೂಲಕ ಕೊಡುವ ಉತ್ತರದಲ್ಲಿ ಈವತ್ತು 10-12 ಪ್ರಮುಖವಾದ ಪ್ರಶ್ನೆಗಳಿಗೆ ಉತ್ತರ ಕೊಡುತ್ತೇವೆಂದು ತೆಗೆದುಕೊಂಡು ಒಂದಕ್ಕೂ ಉತ್ತರ ಬಂದಿಲ್ಲ.

ಅಧ್ಯಕ್ಷರು : 147 ಪ್ರಶ್ನೆಗಳಲ್ಲಿ 88 ಕ್ಕೆ ಉತ್ತರ ಬಂದಿದೆ. ಉಳಿದ ಪ್ರಶ್ನೆಗಳಿಗೆ....

+ ಶ್ರೀ ಬಿ. ಎಸ್. ಯಡಿಯೂರಪ್ಪ : ಪ್ರಮುಖವಾಗಿರತಕ್ಕ ಪ್ರಶ್ನೆಗಳಿಗೆ ಉತ್ತರ ಬಂದಿಲ್ಲ.ಯಾವುದು ಇಲ್ಲಿ ಚುಕ್ಕೆ ಗುರುತಿನ ಪ್ರಶ್ನೆಯಾಗಿ ಬಂದು ಚರ್ಚೆಯಾಗಬೇಕಾಗಿತೋ ಅದು ಪರಿವರ್ತನೆಯಾಗಿಯಾದರೂ ಬರಬೇಕಲ್ಲ. ಎಂ.ಪಿ.ಎಂ. ಬಗ್ಗೆ, ರೈತರ ಬಗ್ಗೆ ಪ್ರಮುಖವಾದ ವಿಷಯದ ಬಗ್ಗೆ

ಅಧ್ಯಕ್ಷರು : ಸರ್ಕಾರಕ್ಕೆ ಮತ್ತೊಮ್ಮೆ ಸೂಚನೆಯನ್ನು ಕೊಡುತ್ತೇನೆ. ಲಿಖಿತ ಮೂಲಕ ಬರತಕ್ಕಂತಹ ಪ್ರಶ್ನೆಗಳನ್ನು ಮತ್ತು ಚುಕಕ್ಕೆ ಗುರುತಿನ ಪ್ರಶ್ನೆಗಳನ್ನು ಕೇಳಿದಾಗ ತ್ವರಿತ ಗತಿಯಲ್ಲಿ ನಿಯಮಿತವಾದ ವೇಳೆಯಲ್ಲಿ, ನಿಯಮಿತವಾದ ದಿನದಲ್ಲಿ ಉತ್ತರ ಕೊಡತಕ್ಕಂತಹ ವಿಷ್ಣಾಡನ್ನು ಮಾಡಬೇಕು.

ಶ್ರೀ ಪಾಟಾಳ್‌ನಾಗರಾಜ್ : ಅಧ್ಯಕ್ಷರೆ, ಇದರ ಬಗ್ಗೆ ಅನೇಕ ಸಂದರ್ಭಗಳಲ್ಲಿ ಹೇಳಿದ್ದೀನಿ. ಇದೇನು ಮೊದಲ ಸಲವಲ್ಲ ನಮಗೆ ದೊಡ್ಡ ದೊಡ್ಡ ಪುಸ್ತಕಗಳು ಬರುತ್ತವೆ. ನಮ್ಮ ಪ್ರಶ್ನೆಯನ್ನು ನಾವು ಒತ್ತಾಯಿಸಬೇಕೇ ಹೊರತು ಉತ್ತರ ಸಿಗುತ್ತಿಲ್ಲ.

ಶ್ರೀ ಬಿ. ಎಸ್. ಯಡಿಯೂರಪ್ಪ : ಈ ಸದನದ ಕಾರ್ಯಕಲಾಪಗಳು ಮುಗಿಯುವುದರೊಳಗಾಗಿ ಅದರೆ 27ನೇ ತಾರೀಕಿನೊಳಗೆ ಯಾವುದಕ್ಕೆ ಉತ್ತರ ಸಿಕ್ಕಿಲ್ಲವೋ ಅದಕ್ಕೆ ಉತ್ತರವನ್ನು ಕೊಡುವಂಥ ವ್ಯವಸ್ಥೆ ಮಾಡಬೇಕು.

ಶ್ರೀ ಪಾಟಾಳ್‌ನಾಗರಾಜ್ : ಈ ಸದನ ಮುಗಿಸುವುದರೊಳಗೆ ತಾವು ಇದಕ್ಕೆ ಉತ್ತರವನ್ನು ದೊರಕಿಸಿಕೊಡುವ ವ್ಯವಸ್ಥೆಯನ್ನು ಮಾಡಬೇಕು.